ಇಲ್ಲ. ಪಂಚಾಯತ್ ಆಕ್ಟ್ ಪ್ರಕಾರ ಏನು ಚುನಾವಣೆ ನಡೆಸಬೇಕು ಅದಕ್ಕೂ ಕೂಡ ಇವರು ಒಪ್ಪುತ್ತಿಲ್ಲ. ಯಾವುದೇ ರೀತಿಯಿಂದ ಸುಪ್ರೀಂ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತೆಗೆದುಕೊಂಡು ಚುನಾವಣೆ ಮುಂದಕ್ಕೆ ಹಾಕಬೇಕು ಎನ್ನುವ ಒಂದೇ ಧೋರಣೆ ಇದೆ ಹೊರತಾಗಿ ಬೇರೆ ಯಾವ ದೃಷ್ಟಿಯಿಂದಲೂ ಕೂಡ ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ಅದಕ್ಕಾಗಿ ಇವತ್ತು ಮುಂಜಾನೆ ಲಾ ಮಿನಿಸ್ಟರ್ ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದಂತಹ ಮಾತುಗಳನ್ನು ಮರೆಮಾಚುವಂತಹ ಮಾತುಗಳನ್ನು ಎಲೆಕ್ಷನ್ ಪ್ರೋಸಸ್ ಪ್ರಾರಂಭವಾಗಿದಾದರೂ ಕೂಡ ಬಚ್ಚಿಡುವಂತಹ ಮಾತನ್ನು ಸದನದ ಮುಂದೆ ಅವರು ಇಟ್ಟಿದ್ದಾರೆ. ಅದಕ್ಕೆ ಬಹಳ ಸ್ಪಷ್ಟವಾಗಿ ಇವರು ಕಾನ್ಸ್‌ಟಿಟ್ಯೂಷನ್‌ಗೆ ಮರ್ಯಾದೆ ಕೊಡುವುದಿಲ್ಲ, ಎಲೆಕ್ಷನ್ ಕಮಿಷನ್‌ಗೂ ಕೊಡುವುದಿಲ್ಲ, ಕೋರ್ಟ್‌ಗೂ ಕೊಡುವುದಿಲ್ಲ, ಜನರಿಗೂ ಮರ್ಯಾದೆ ಕೊಡುವುದಿಲ್ಲ. ಆದರೆ ಇವರು ಇವತ್ತಿನ ದಿನಸ ಚುನಾವಣೆಗೆ ನಾವು ತಯಾರಿದ್ದೇವೆ ಎಂದು ಇವರೂ ತೋಳು ಏರಿಸಿದ್ದು, ಅವರೂ ಏರಿಸಿದ್ದು. ಹಾಗಾದರೆ ಮಾಡಿ ಎಲ್ಲಾ ರೆಡಿ ಇದ್ದೀರಲ್ಲಾ, ಮತ್ತೆ ಏಕೆ ಹಿಂದಕ್ಕೆ ಹೋಗುತ್ತಿದ್ದೀರಿ? ಆದರೆ ಇವರು ಒಳಜಗಳಗಳಿಂದ, ಇವರ ಕಜ್ಜಾಟದಿಂದ, ಇವರಿಗೆ ಇವತ್ತು ಎಲೆಕ್ಷನ್ ಫೇಸ್ ಮಾಡತಕ್ಕಂಥ ಧೈರ್ಯ ಇಲ್ಲ ಎಂದು ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆನ್ನುವ ಕುತಂತ್ರ ನಡೆಸುತ್ತಿದ್ದಾರೆ. ಆದುದರಿಂದ ಕುತಂತ್ರ ಮಾಡತಕ್ಕಂಥ ಅವರ ಧೋರಣೆ ವಿರುದ್ಧ, ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಇತರ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಚುನಾವಣಾ ಆಯೋಗದ ಈ ಪತ್ರಿಕಾ ಪ್ರಕಟಣೆ ದಿನಾಂಕ 22.3.99ರಂದು ಹೊರಟಿರತಕ್ಕಂಥಾದ್ದು. ಯಾವುದೇ ಚುನಾವಣೆ ಮಾಡಬೇಕಾದರೆ ಕೇಂದ್ರ ಚುನಾವಣಾ ಆಯೋಗ ಇರಬಹುದು, ರಾಜ್ಯ ಚುನಾವಣಾ ಆಯೋಗ ಇರಬಹುದು, ಚುನಾವಣೆ ಮಾಡಬೇಕಾದರೆ ಅದಕ್ಕೆ ಬೇಕಾದಂತಹ ಸಲಕರಣೆಗಳ ಬಗ್ಗೆ ಸರ್ಕಾರದ ಜೊತೆ ಮಾತುಕತೆ ಆಡತಕ್ಕಂಥಾದ್ದು ಇದೆ. ಆದು ಕಾನೂನು ಸುವ್ಯವಸ್ಥೆ ಇರಬಹುದು, ಹಣಕಾಸಿನ ವ್ಯವಸ್ಥೆ ಇರಬಹುದು, ಎಲ್ಲಾ ದೃಷ್ಟಿಯಿಂದ ಬೂತ್ ಮಾಡತಕ್ಕಂಥ ವ್ಯವಸ್ಥೆ ಬಗ್ಗೆ ಸರ್ಕಾರದ ಜೊತೆ ಮಾತುಕತೆ ಆಡಬೇಕಾಗುತ್ತದೆ. ಮಾತುಕತೆ ಆಡದೇ ಅವರೇ ಇದ್ದಕ್ಕಿದ್ದಹಾಗೆ ನಾಳೆ ಚುನಾವಣೆ ಮಾಡುತ್ತೇವೆಂದರೆ ಆದು ಸರಿಯಾದಂತಹ ನಿರ್ಧಾರವಾಗುವುದಿಲ್ಲ. ಚುನಾವಣೆ ಆಯೋಗ ಎಷ್ಟೇ ಸ್ವತಂತ್ರವಾಗಿದ್ದರೂ ಕೂಡ ಈ ಸಂದರ್ಭದಲ್ಲಿ ಅವರು ಸ್ವಲ್ಪ ಎಡವಿದ್ದಾರೆ. ಆದು ಸ್ಪಷ್ಟ ಅಭಿಪ್ರಾಯ. ನಾನು ನೇರವಾಗಿ ಹೇಳುತ್ತಿದ್ದೇನೆ, ಚುನಾವಣೆ ಆಗಬೇಕೆನ್ನುವುದು ಎಲ್ಲರ ಅಭಿಪ್ರಾಯ. ಚುನಾವಣೆ ಆಗಬೇಕೆಂದು ದಿ: 22.3.99ರಂದು ಈ ಪ್ರಕಟಣೆ ಹೊರಡಿಸಬೇಕಾದರೆ ನಿನ್ನೆ ಮೊನ್ನೆ ಈ ವಿಚಾರದಲ್ಲಿ ಸರ್ಕಾರದ ಜೊತೆ ಮಾತುಕತೆ ಆಡಬೇಕು. ಗೃಹ ಮಂತ್ರಿಗಳ ಜೊತೆ ಮಾತನಾಡಬೇಕು. ಮುಖ್ಯ ಕಾರ್ಯದರ್ಶಿಗಳ ಜೊತೆ ಮಾತನಾಡಬೇಕು. ಮಾತನಾಡಿಲ್ಲವೇ? ಮಾತನಾಡಿದ್ದರೆ ಬೆಳಿಗ್ಗೆ ಸಂಸದೀಯ ಸಚಿವರು ಉತ್ತರ ಕೊಡುವಾಗ ಹೇಳಿರುತ್ತಿದ್ದರು. ನಾನು ತಮ್ಮನ್ನು ನೇರವಾಗಿ ಹೇಳುವುದೇನೆಂದರೆ ಇವತ್ತು ಹೊರಟಿರತಕ್ಕಂಥ ಪ್ರಕಟಣೆಗೂ ತಮ್ಮ ಜೊತೆಯಲ್ಲಿ ಚುನಾವಣಾ ಆಯೋಗದ ವ್ಯವಸ್ಥೆಗೆ ನಿಮ್ಮನ್ನು ಕರೆಯಲೇಬೇಕು. ಅದಕ್ಕೆ ಪೊಲೀಸ್ ಬಂದೋಬಸ್ತು ಬೇಕಾಗುತ್ತದೆ. ಅನೇಕ ವಿಚಾರದಲ್ಲಿ ಸರ್ಕಾರ ಮಾತನಾಡಬೇಕಾಗುತ್ತದೆ. ಇದಕ್ಕೆ ನಿಮ್ಮ ಅಧಿಕಾರಿಗಳು ಹಾಗೂ ಅಲ್ಲಿ ಕುಳಿತುಕೊಳ್ಳತಕ್ಕಂಥ ಸಿಬ್ಬಂದಿ